ಬದುಕಿನ ಆ ಒಂದು ಸುಂದರ ಗಳಿಗೆ.. ಒಂಟಿಯಿಂದ ಜಂಟಿಯಾಗುವ ಸಂಭ್ರಮ.! ಈ ಸಂಭ್ರಮಕ್ಕೆ ಹಿರಿಯರ, ಬಂಧುಗಳ, ಸ್ನೇಹಿತರ ಸಾನಿಧ್ಯ, ಶುಭಾಶೀರ್ವಾದಗಳು.. ಸವಿಯಾದ ಅದರಾತಿಥ್ಯ.. ಅಷ್ಟೇ ಸವಿಯಾದ ಇನಿಯನ/ ಇನಿಯಳ ಪಿಸುಮಾತುಗಳು.. ಇಷ್ಟೇ ಸಾಕೇ ಮದುವೆಯ ಈ ಬಂಧಕ್ಕೆ? ಆಡಂಬರಕ್ಕೆ ಇಂಬು ನೀಡುವ ವಸ್ತ್ರಾಭರಣಗಳ ವೈಭೋಗ ಬೇಡವೇ ಅನುರಾಗದ ಅನುಬಂಧಕ್ಕೆ?

ಭಾರತೀಯ ವಿವಾಹ ಮಹೋತ್ಸವಗಳೆಂದರೆ ಗಂಡು– ಹೆಣ್ಣಿನ ಜೋಡಿ ಮದುವೆ ಬಂಧನಕ್ಕೆ ಒಳಗಾಗಿ ಕೈ ಕೈ ಹಿಡಿದು ಭವಿಷ್ಯದತ್ತ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ನಡೆಯುವ ಸೊಗಸನ್ನು ಕಣ್ತುಂಬಿಕೊಳ್ಳುವುದಷ್ಟೇ ಅಲ್ಲ, ಎರಡು ಮನಸುಗಳ ಮಿಲನಕ್ಕೆ, ಅದಕ್ಕೆ ಹಿರಿಯರ ಅಂಗೀಕಾರ ಮುದ್ರೆಗೆ ಮುಹೂರ್ತ ಇಡುವುದಷ್ಟೇ ಅಲ್ಲ, ಅದು ಕಣ್ಣು ಕೋರೈಸುವ ರಂಗಿನ ಸೀರೆ, ಉಡುಪುಗಳ ಮೇಳ; ಮಿಂಚುವ ವಜ್ರ, ಚಿನ್ನಾಭರಣಗಳ ಸಮ್ಮಿಲನ.

ಹಿಂದಿನಿಂದಲೂ ಅಷ್ಟೇ, ಮದುವೆಗೆ ಇನ್ನೊಂದು ಹೆಸರೇ ವೈಭವ. ಕೈಯಲ್ಲಿ ಕಾಸು ಇದ್ದವರು ಇಂದ್ರಲೋಕದ ಮಿಂಚನ್ನೇ ವಿವಾಹ ಮಂಟಪದಲ್ಲಿ ತಂದಿಟ್ಟರೆ, ಇದ್ದಷ್ಟೇ ಹಣದಲ್ಲಿ ಸಡಗರ ತುಂಬಿಕೊಳ್ಳುವವರಿಗೇನೂ ಕೊರತೆಯಿಲ್ಲ. ಪತಿಯ ಮನೆಗೆ ಕಾಲಿಡಲು, ಆ ಕುಟುಂಬದಲ್ಲಿ ಒಂದಾಗಲು ಕಾದು ನಿಂತ ವಧುವಿಗೆ ಶೋಭಿಸುವ ಶೋಡಷ ಅಲಂಕಾರಗಳು ಹಿಂದೆಯೂ ಇದ್ದವು, ಈಗಲೂ ಅಷ್ಟೇ, ಮುಡಿಯಿಂದ ಅಡಿಯ ತನಕ ಸಿಂಗರಿಸಿಕೊಂಡು ಅಡಿಯ ಮೇಲೆ ಅಡಿಯನಿಡುತ್ತ, ಕೈಯಲ್ಲಿ ವರಮಾಲೆ ಹಿಡಿದು ಮಂಟಪಕ್ಕೆ ಸಾಗುವ ಮದುಮಗಳ ಜೊತೆ ವರನಿಗೂ ಭರ್ಜರಿಯಾಗೇ ಅಲಂಕರಿಸಿಕೊಳ್ಳುವ ಹುಮ್ಮಸ್ಸು. ಯಾರಿಗೆ ತಾನೇ ಇಷ್ಟವಿರಲ್ಲ ಹೇಳಿ, ಬದುಕಿನ ಮಹತ್ತರವಾದ ದಿನದಂದು ಆಕರ್ಷಕವಾಗಿ ಕಾಣಿಸಿಕೊಳ್ಳಲು! ಇದಕ್ಕೆ ತಕ್ಕ ಹಾಗೇ ಬೇಡಿಕೆ ಪೂರೈಸಲು ಉಡುಪು, ಒಡವೆ, ಫ್ಯಾಷನ್ ಉದ್ಯಮವೂ ಬೆಳೆದು ನಿಂತಿದೆ. ಅದೀಗ ಕೋಟ್ಯಾಂತರ ರೂಪಾಯಿಗಳ ವಹಿವಾಟು.

ವಿವಾಹಕ್ಕೆ ಅಗತ್ಯವಿರುವ ಸೀರೆ, ಲೆಹಂಗ, ಚೋಲಿ ಮೊದಲಾದ ಉಡುಪಿನ ಸಂಗ್ರಹವನ್ನೇ ತೆಗೆದುಕೊಂಡರೆ ಇತ್ತೀಚಿನ ರಾಶಿ ರಾಶಿ ಟ್ರೆಂಡ್‌ಗಳು ನಿಮ್ಮೆದುರು ಬಂದು ಬೀಳುತ್ತವೆ. ಹೊಸ ವಿನ್ಯಾಸ, ವಿನೂತನ ಶೈಲಿ; ಅಜ್ಜಿಯ ಸೀರೆಯ ಮಡಿಕೆಯಲ್ಲಿ ಬಚ್ಚಿಟ್ಟುಕೊಂಡ ಹಳೆಯ ಫ್ಯಾಷನ್‌ಗೇ ರಿಮಿಕ್ಸ್ ಮಾಡಿ ಅಜ್ಜಿಯ ಮುಖದ ಗೆರೆಯಲ್ಲಿ ನಾಚಿಕೆಯರಳಿಸುವ, ಆಧುನಿಕ ಯುವತಿಯರನ್ನು ದಂಗುಬಡಿಸುವ ಟ್ರೆಂಡ್‌ಗಳನ್ನು ಕೂಡಾ ನಮ್ಮ ಭಾರತೀಯ ಫ್ಯಾಷನ್ ಗುರುಗಳು ಮುಂದಿಡುತ್ತಿದ್ದಾರೆ. ಫ್ಯಾಷನ್ ರ‍್ಯಾಂಪ್‌ನಿಂದ ನೇರವಾಗಿ ಮದುಮಗಳ ದೇಹಕ್ಕೆ ಅಪ್ಪಿಕೊಳ್ಳುವಂತಹ ಉಡುಪುಗಳೂ ಈಗ ಲಭ್ಯ.

ವಧುವಿನ ಅದರಲ್ಲೂ ದಕ್ಷಿಣ ಭಾರತದ ವಧುವಿನ ಸೀರೆಗಳ ಆಯ್ಕೆಯ ವಿಷಯ ಬಂದರೆ ಈಗಲೂ ಕಣ್ಮುಂದೆ ಎದ್ದು ಕಾಣುವ ಹೆಸರು ಕಾಂಜೀವರಂ ಹಾಗೂ ಬನಾರಸ್. 'ಈ ಸಾಂಪ್ರದಾಯಕ ಸೀರೆಗಳು ಈಗಲೂ ಆಧುನಿಕ ಮದುಮಗಳ ಮನಸೆಳೆಯುತ್ತವೆ' ಎನ್ನುತ್ತಾರೆ 1920ರಿಂದ ಮದುಮಗಳ ಸೀರೆ– ಉಡುಪುಗಳ ಕ್ಷೇತ್ರದಲ್ಲಿ ಹೆಸರು ಮಾಡಿರುವ 'ವಿಜಯಲಕ್ಷ್ಮಿ ಸಿಲ್ಕ್ಸ್'ನ ಪಾಲುದಾರ ಹಾಗೂ ನಾಲ್ಕನೇ ತಲೆಮಾರಿನ ಅಭಿಷೇಕ್ ಗೋವರ್ಧನ್.

ಕಣ್ಮನ ಸೆಳೆಯುವ ಒಡಲಿನ ವರ್ಣಗಳು, ಅಗಲವಾದ ಅಂಚಿನ ಚಿನ್ನದ ಮಿಂಚು, ಭರ್ಜರಿ ವಿನ್ಯಾಸದ ಸೆರಗುಳ್ಳ ಸೀರೆಗಳು ವಧುವಿಗೆ ಹೇಳಿ ಮಾಡಿಸಿದಂಥವು. 'ಸಾಮಾನ್ಯವಾಗಿ ಕಾಂಜೀವರಂ, ಬನಾರಸಿ, ಗದ್ವಾಲ್, ಉಪ್ಪಡ, ಇಕಟ್ ಸೀರೆಗಳು ಮದುವೆ ಸೀರೆಗಳು ಎಂದೇ ಹೆಸರಾದರೂ ಅಗಲ ಅಂಚಿನ ಕಾಂಜೀವರಂ, ಬನಾರಸ್ ಸೀರೆಗಳಿಗೇ ಹೆಚ್ಚು ಬೇಡಿಕೆ. ಈ ಸೀರೆಗಳು ಕೌಶಲ್ಯಪೂರ್ಣ ನೇಯ್ಗೆ ಮತ್ತು ಗಾಢವಾದ, ವೈಭವೋಪೇತವಾದ ಬಣ್ಣಕ್ಕೆ ಹೆಸರುವಾಸಿ. ತಿಳಿ ರಂಗುಗಳಾದ ಪಿಸ್ತಾ ಹಸಿರು, ಲಿಂಬು ಹಳದಿ, ತಿಳಿ ಗುಲಾಬಿಯಂತಹವು ಕೂಡ ಸದ್ಯಕ್ಕೆ ಚಾಲ್ತಿಯಲ್ಲಿವೆ' ಎನ್ನುವ ಅಭಿಷೇಕ್, 'ವಿಭಿನ್ನ ಹಾಗೂ ವಿಶೇಷಕ್ಕೆ ಹೆಚ್ಚು ಬೇಡಿಕೆಯಾದರೂ ಕೆಲವರು ಸಾಂಪ್ರದಾಯಕ ವಿನ್ಯಾಸದ ಸೀರೆಗಳನ್ನೇ ಬಯಸ್ತಾರೆ. 60–70 ವರ್ಷಗಳ ಹಿಂದಿನ ವಿನ್ಯಾಸ ಮಾಡಿಕೊಡಿ ಎಂದು ಕೇಳುವವರೂ ಇದ್ದಾರೆ. ನಮ್ಮ ಪರಿಣತ ನೇಕಾರರ ಮೂಲಕ ಗ್ರಾಹಕರ ರುಚಿಗೆ ತಕ್ಕಂತೆ ವಿನ್ಯಾಸ ಮಾಡಿಕೊಡಲಾಗುವುದು' ಎಂದು ವಿವರಿಸುತ್ತಾರೆ. ನವಿಲಿನ, ರುದ್ರಾಕ್ಷಿಯ ವಿನ್ಯಾಸದ ಸಾಂಪ್ರದಾಯಕ ಕಾಂಜೀವರಂ ಅಂಚನ್ನು ಹೊಂದಿರುವ ಇಕಟ್ ಪಟೋಲ ರೇಷ್ಮೆ ಸೀರೆಗಳು ಇವರ ಮಳಿಗೆಯ ವಿಶೇಷ.



**ಕಾಂಜೀವರಂ ಸೀರೆಯ ವಿಷಯ ಬಂದಾಗ ಸಹಜವಾಗಿ ನೆನಪಾಗುವುದು ಬಾಲಿವುಡ್‌ನ ಹಿರಿಯ ನಟಿ ರೇಖಾ. ದಕ್ಷಿಣ ಭಾರತೀಯಳಾದ ರೇಖಾ ಬಳಿ ಕಾಂಜೀವರಂನ ಅಗಾಧ ಸಂಗ್ರಹವೇ ಇದೆ. ಸಿನಿಮಾಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಆಕೆ ಕಾಂಜೀವರಂ ಸೀರೆ ಜೊತೆ ಮ್ಯಾಚಿಂಗ್ ಆಭರಣ ತೊಟ್ಟು ಬಂದರೆ ಕ್ಯಾಮೆರಾ ಆಕೆಯ ಕಡೆಯೇ ಫೋಕಸ್ ಆಗುತ್ತದೆ.**